ಹೆಸರು: ಬಸವರಾಜ ಕಟ್ಟಿಮನಿ

ವರ್ಗ : BA - I

ರೋಲ್ ನಂ.: 20

ಚಟುವಟಿಕೆ: ಜನರಲ್ ಬಾಡಿನ್ ಇಲೆಕ್ಟ್.

ವಿಭಾಗ: ಇತಿಹಾಸ.

ಮಾರ್ಗದರ್ಶಕರು: ಶ್ರೀ S. R. ನಾಗಣ್ಣನವರ

ಕಾಲೇಜ್ : V.M.K.S.R.V - Hungund

# ಜನರಲ್ ಬಿಪಿನ್ ರಾವತ್ - India's First - CDS..




ಠಿಕೆ:-

ಭಾರತದ ರಕ್ಷಣಾ ಸಿಬ್ಬಂದಿ ಮುಖ್ಯಸ್ಥ (ಸಿಡಿಎಸ್) ಜನರಲ್ ಬಿಪಿನ್ ರಾವತ್, ಶಿಮ್ಲಾದ ಸೆಂಟ್ ಎಡ್ವರ್ಡ್ ಸ್ಕೂಲ್ ಮತ್ತು ್ಯಾಷನಲ್ ಡಿಫೆನ್ಸ್ ಅಕಾಡೆಮಿಯ ಹಳೆಯ ವಿದ್ಯಾರ್ಥಿ ಆಗಿದ್ದಾರೆ ವರು 16 ಡಿಸೆಂಬರ್ 1978ರಂದು ಪದಾತಿದಳದ 11ನೇ ೂರ್ಖಾ ರೈಫಲ್ಸ್‌ನ 5ನೇ ಬೆಟಾಲಿಯನ್ ಗೆ ನಿಯೋಜಿಸಲ್ಪಟ್ಟರು. ಬೆಟಾಲಿಯನ್ ಅನ್ನು ಅವರ ತಂದೆ ನೇತೃತ್ವ ಸಿ ಕೊಂಡಿದ್ದರು. ಡೆಹ್ರಾಡೂನ್‌ನ ಇಂಡಿಯನ್ ಮಿಲಿಟರಿ ಕಾಡೆಮಿಯಿಂದ ಪದವಿ ಪಡೆದ ನಂತರ ಅವರು 'ಸ್ವೋ ರ್ಡ್ ಆಫ್ ಆನರ್' ಪ್ರಶಸ್ತಿ ಪಡೆದರು. ಹೀಗೆ ರಾವತ್ ರವರು ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ ಇವರು CDS ಆಗುವುದಕ್ಕೂ ಮೊದಲು ಭೂಸೇನೆಯ ಮುಖ್ಯಸ್ಥರಾಗಿ ಕಾರ್ಯ ನಿರ್ವಹಣೆ ಮಾಡಿದ್ದಾರೆ ನಂತರ CDS ಆಗಿ ನೇಮಕವಾದ್ದರು. ರಾವತ್‌ರ ಜೀವನ ಚರಿತ್ರೆಯನ್ನು ಈ ಕೆಳಗಿನಂತೆ ನೋಡಬಹುದು.

## ಜನನ ಮತ್ತು ಕೌಟುಂಬಿಕ ಹಿನ್ನೆಲೆ :-

ಜನರಲ್ ರಾವತ್ ಅವರ 1958 ರ ಮಾರ್ಚ್ 16 ರಂದು ಉತ್ತರಾಖಂಡ ರಾಜ್ಯದ ಪೌರಿಯಲ್ಲಿ ಜನಿಸಿದರು. ಹಲವು ತಲೆಮಾರುಗಳಿಂದ ಅವರ ಕುಟುಂಬ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿತ್ತು. ಅವರ ತಂದೆ ಲಕ್ಷ್ಮಣ್ ಸಿಂಗ್ ರಾವತ್ ಉತ್ತರಾಖಂಡದ ಪೌರಿ ಗಢವಾಲ್ ಜಿಲ್ಲೆಯ ಸೈಂಜ ಗ್ರಾಮದವರು. ಇವರು ಭಾರತೀಯ ಸೇನೆಯಲ್ಲಿ ಲೆಫ್ಟಿನೆಂಟ್ ಜನರಲ್ ಹುದ್ದೆ ಏರಿದ್ದರು. ಡೆಹ್ರಾಡೂನ್ ನ ಕೇಂಬ್ರಿಯನ್ ಹಾಲ್ ಸ್ಕೂಲ್ ನಲ್ಲಿ ಪ್ರಾಥಮಿಕ ಶಿಕ್ಷಣ ಹಾಗೂ ಶಿಮ್ಲಾದ ಸೈಂಟ್ ಎಡ್ವರ್ಡ್ ಶಾಲೆಯಲ್ಲಿ ಮಾಧ್ಯಮಿಕ, ಪ್ರೌಢ ಶಿಕ್ಷಣ ಮುಗಿಸಿ ನಂತರ ವೆಲ್ಲಿಂಗ್ಟನ್ ನ ಡಿಫೆನ್ಸ್ ಸರ್ವೀಸಸ್ ಸ್ಟಾಫ್ ಕಾಲೇಜ್ (ಡಿಎಸ್ಎಸ್ಸಿ) ಮತ್ತು ಯುನೈಟೆಡ್ ಸ್ಟೇಟ್ಸ್ ಆರ್ಮಿ ಕಮಾಂಡ್ ಮತ್ತು ಕಾನ್ಸಾಸ್ ನ ಫೋರ್ಟ್ ಲೀವೆನ್ ವರ್ತ್ ನಲ್ಲಿರುವ ಜನರಲ್ ಸ್ಟಾಫ್ ಕಾಲೇಜಿನಲ್ಲಿ ಹೈಯರ್ ಕಮಾಂಡ್ ಕೋರ್ಸ್ ನ ಪದವಿ ಪಡೆದರು.

## ಶಿಕ್ಷಣ :-

ರಾವತ್ ಅವರು ಡೆಹ್ರಾಡೂನ್ ನ ಕ್ಯಾಂಬ್ರಿಯನ್ ಹಾಲ್ ಸ್ಕೂಲ್ ಮತ್ತು ಶಿಮ್ಲಾದ ಸೆಂಟ್ ಎಡ್ವರ್ಡ್ಸ್ ಸ್ಕೂಲ್ ನಲ್ಲಿ ತಮ್ಮ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸುತ್ತಾರೆ. ಶಾಲಾ ಶಿಕ್ಷಣದ ನಂತರ, ಅವರು ವೆಲ್ಲಿಂಗ್ಟನ್ ನ ಡಿಫೆನ್ಸ್ ಸರ್ವೀಸಸ್ ಸ್ಟಾಫ್ ಕಾಲೇಜ್ (DSSC) ಮತ್ತು ಯುನೈಟೆಡ್ ಸ್ಟೇಟ್ಸ್ ಆರ್ಮಿ ಕಮಾಂಡ್ ಮತ್ತು ಕಾನ್ಸಾಸ್ ನ ಫೋರ್ಟ್ ಲೀವೆನ್ ವರ್ತ್ ನಲ್ಲಿರುವ ಜನರಲ್ ಸ್ಟಾಫ್ ಕಾಲೇಜ್ ನಲ್ಲಿ ಹೈಯರ್ ಕಮಾಂಡ್ ಕೋರ್ಸ್ ಪದವೀಧರರಾಗಿದ್ದಾರೆ. DSSC ಯಲ್ಲಿ ಅವರ

ಅಧಿಕಾರವಾಗಿಯಿಂದ, ಅವರು ಡಿಫೆನ್ಸ್ ಸ್ಟಡೀಸ್ ನಲ್ಲಿ ಎಂಫಿಲ್ ಪದವಿ ಮತ್ತು ಮದ್ರಾಸ್ ವಿಶ್ವವಿದ್ಯಾಲಯದಿಂದ ಮ್ಯಾನೇಜ್ ಮೆಂಟ್ ಮತ್ತು ಕಂಪ್ಯೂಟರ್ ಅಧ್ಯಯನದಲ್ಲಿ ಡಿಪ್ಲೊಮಾಗಳನ್ನು ಹೊಂದಿದ್ದಾರೆ 2011 ರಲ್ಲಿ ಮೀರಟ್‌ನ ಚೌಧರಿ ಚರಣ್ ಸಿಂಗ್ ವಿಶ್ವವಿದ್ಯಾನಿಲಯವು ಮಿಲಿಟರಿ - ಮಾಧ್ಯಮ ಕಾರ್ಯತಂತ್ರದ ಅಧ್ಯಯನಗಳ ಕುರಿತು ಅವರ ಸಂಶೋಧನೆಗಾಗಿ ಡಾಕ್ಟರೇಟ್ ಆಫ್ ಫಿಲಾಸಫಿಯನ್ನು ನೀಡಿತು.

ರಾವತ್ ರವರು ವೆಲ್ಲಿಂಗ್ಟನ್ ನ ಡಿಫೆನ್ಸ್ ಸರ್ವೀಸಸ್ ಸ್ಟಾಫ್ ಕಾಲೇಜ್ (ಡಿಎಸ್ಎಸ್‌ಸಿ) ನಿಂದಲೂ ಶಿಕ್ಷಣ ಪಡೆದರು ಹಾಗು ಅಮೇರಿಕಾ ಸಂಯುಕ್ತ ಸಂಸ್ಥಾನದ ಆರ್ಮಿ ಕಮಾಂಡ್ ಹಾಗೂ ಕಾನ್ಸಾಸ್‌ನ ಫೋರ್ಟ್ ಲೆವೆನ್ ವರ್ತ್ ನಿಂದ ಜನರಲ್ ಕಮಾಂಡ್ ಕೋರ್ಸನ್ನು ಪಡೆದರು. ಮತ್ತು ಡಿಎಸ್‌ಎಸ್‌ಸಿಯ ವಿದ್ಯಾಭ್ಯಾಸದ ಅವಧಿಯಲ್ಲಿ ಎಮ್ ಫಿಲ್ ಪದವಿಯನ್ನು ಪಡೆದರು. ಮುಂದೆ, 2011 ರಲ್ಲಿ ಬಂಧ ಸೈನ್ಯ ಹಾಗೂ ಮಾಧ್ಯಮಗಳ ಸಂಶೋಧನೆಗಾಗಿ ಮೀರಟ್ ಚೌಧರಿ ಚರಣ್ ಸಿಂಗ್ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ ಪದವಿಯು ದೊರೆಯಿತು.

ಸೇನಾ ಪಡೆಯಲ್ಲಿ :-

ರಾವತ್ ಅವರನ್ನು ಡಿಸೆಂಬರ್ 16, 1978 ರಂದು 11 ಗೂರ್ಖಾ ರೈಫಲ್ಸ್‌ನ 5ನೇ ಬೆಟಾಲಿಯನ್ ಗೆ ಕರ್ನಲ್ ಆಗಿ ನಿಯೋಜಿತರಾಗಿರು ಮೂಲಕ ಭಾರತೀಯ ಸೇನೆಗೆ ಪ್ರವೇಶಿಸಿದರು. ಅವರು ಸೆಕ್ಟರ್‌ನಲ್ಲಿನ ನಿಯಂತ್ರಣಾ ರೇಖೆಯ ಉದ್ದಕ್ಕೂ ಪೂರ್ವ ವಲಯದಲ್ಲಿ

11 ನೇ ಗೂರ್ಖಾ ರೈಫಲ್ಸ್‌ನ 5ನೇ ಬೆಟಾಲಿಯನ್‌ಗೆ ಕಮಾಂಡರ್ ಆಗಿದ್ದರು. ಬಳಿಕ ಬ್ರಿಗೇಡಿಯರ್ ಹುದ್ದೆಗೆ ಬಡ್ತಿ ಪಡೆದ ಅವರು ಸೋಪೋರ್‌ನಲ್ಲಿ ರಾಷ್ಟ್ರೀಯ ರೈಫಲ್ಸ್‌ನ ಸೆಕ್ಟರ್‌ಗೆ ಕಮಾಂಡರ್ ಆಗಿ ನೇಮಕಗೊಂಡರು. ನಂತರ ಅವರು ಯುಎನ್ ಮಿಷನ್ ಅಡಿಯಲ್ಲಿ ಕಾಂಗೋನಲ್ಲಿ ನಡೆದ ಆಂತರಿಕ ಗಲಭೆಯನ್ನು ನಿಯಂತ್ರಿಸಲು ಬಹುರಾಷ್ಟ್ರೀಯ ಬ್ರಿಗೇಡ್‌ಗೆ ನಿಯೋಜಿಸಲ್ಪಟ್ಟರು.

ಮೇಜರ್ ಜನರಲ್ ಆಗಿ ಬಡ್ತಿ ಪಡೆದ ನಂತರ, ರಾವತ್ ಉರಿಯಲ್ಲಿ 19ನೇ ಪದಾತಿ ದಳದ ಕಮಾಂಡಿಂಗ್ ಜನರಲ್ ಆಫೀಸರ್ ಆಗಿ ಅಧಿಕಾರ ವಹಿಸಿಕೊಂಡರು. ಲೆಫ್ಟಿನೆಂಟ್ ಜನರಲ್ ಆಗಿ, ಪುಣೆಯಲ್ಲಿ ದಕ್ಷಿಣ ಸೇನೆಯನ್ನು ಸ್ವಾಧೀನ ಪಡಿಸಿಕೊಳ್ಳುವ ಮೊದಲು ದಿಮಾಪುರ್‌ನಲ್ಲಿ ಪ್ರಧಾನ ~~ಕಛೇ~~ ಕಛೇರಿಯನ್ನು ಹೊಂದಿರುವ ಕಾರ್ಪ್ಸ್‌ಗೆ ಕಮಾಂಡರ್ ಆಗಿದ್ದರು. 1 ಜನವರಿ 2016 ರಂದು ಜನರಲ್ ಆಫೀಸರ್ ಕಮಾಂಡಿಂಗ್ - ಇನ್ - ಚೀಫ್ [GOC-in-C] ದಕ್ಷಿಣ ಕಮಾಂಡ್ ಆಗಿ ನೇಮಕಗೊಂಡರು. 2019 ರ ಅಂತ್ಯದಲ್ಲಿ ಭಾರತೀಯ ಸೇನೆಗಳನ್ನು ಏಕತ್ರಗೊಳಿಸುವ ಹಾಗೂ ಮೂರು ಸೇವೆಗಳ ಬಗ್ಗೆ ಒಂದೇ ಕೇಂದ್ರದಿಂದ ಮಾಹಿತಿ ಪಡೆಯಲು ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಹುದ್ದೆಯನ್ನು ಸೃಷ್ಟಿಸಲು ಉದ್ದೇಶಿಸಲಾಯಿತು. 2019 ರ ಜನವರಿ 11 ರಂದು ಈ ಹುದ್ದೆಗೆ ಮೊದಲಿಗರಾಗಿ ಜನರಲ್ ರಾವತ್ ಅವರು ಅಧಿಕಾರ ಸ್ವೀಕರಿಸಿದರು.

## ಬಿಪಿನ್ ರಾವತ್ ನೇತೃತ್ವದ ಪ್ರಮುಖ ಕಾರ್ಯಾಚರಣೆಗಳು:

### ಉಗ್ರರ ವಿರುದ್ಧ ಸರ್ಜಿಕಲ್ ಸ್ಟ್ರೈಕ್ ಹಿಂದೆ ಬಿಪಿನ್ ರಾವತ್ ಚಾಣಾಕ್ಷತನ:

2016 ರಲ್ಲಿ ಸರ್ಜಿಕಲ್ ಸ್ಟ್ರೈಕ್ :- ಉರಿ ಸೇನಾ ಶಿಬಿರದ ಮೇಲೆ ದಾಳಿ ನಡೆಸಿದ್ದು, ಈ ವೇಳೆ 19 ಯೋಧರು ಹುತಾತ್ಮರಾಗಿದ್ದರು. ಉಗ್ರರ ದಾಳಿಗೆ ಪ್ರತೀಕಾರವಾಗಿ 2016 ರ ಸೆಪ್ಟೆಂಬರ್‌ನಲ್ಲಿ ಭಾರತವು ನಿಯಂತ್ರಣ ರೇಖೆ ಬಳಿಯುದ್ದಕ್ಕೂ ಸರ್ಜಿಕಲ್ ಸ್ಟ್ರೈಕ್ ನಡೆಸಿತು. ಅಂದು ಬಿಪಿನ್ ರಾವತ್ ಸೇನಾ ಸಿಬ್ಬಂದಿಯ ಉಪ ಮುಖ್ಯಸ್ಥರಾಗಿದ್ದರು. ಸರ್ಜಿಕಲ್ ಸ್ಟ್ರೈಕ್ ಕಾರ್ಯತಂತ್ರದ ಪ್ರಮುಖ ಭಾಗವಾಗಿದ್ದು, ದೆಹಲಿಯಲ್ಲಿ ಸರ್ಜಿಕಲ್ ಸ್ಟ್ರೈಕ್ ಕುರಿತು ಮೇಲ್ವಿಚಾರಣೆ ನಡೆಸಿದ್ದರು. ಇದಾಗಿ ಮೂರು ತಿಂಗಳ ನಂತರ, ಅವರು ಸೇನಾ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡರು.

### 2019 ರಲ್ಲಿ ಬಾಲಾಕೋಟ್ ಮೇಲೆ ದಾಳಿ:-

ಭಾರತದ ಮೊದಲ ಸೇನಾ ಸಿಬ್ಬಂದಿ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದ 63 ವರ್ಷದ ಬಿಪಿನ್ ರಾವತ್ ಹಲವು ಸೇನಾ ಕಾರ್ಯಾಚರಣೆಗಳ ನೇತೃತ್ವ ವಹಿಸಿಕೊಂಡಿದ್ದರು. ಜಮ್ಮು ಮತ್ತು ಕಾಶ್ಮೀರದ ಪುಲ್ವಾಮದಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ 40 ಕ್ಕೂ ಹೆಚ್ಚು ಸೈನಿಕರು ಸಾವನ್ನಪ್ಪಿದ ದಿನಗಳ ನಂತರ, ಫೆಬ್ರವರಿ 2019 ರಲ್ಲಿ ಪಾಕಿಸ್ತಾನದ ಬಾಲಾಕೋಟ್‌ನಲ್ಲಿರುವ ಜೈಶ್-ಎ-ಮೊಹಮ್ಮದ್ ಭಯೋತ್ಪಾದಕ ತರಬೇತಿ ಕೇಂದ್ರವನ್ನು ಗುರಿಯಾಗಿಟ್ಟುಕೊಂಡು ಭಾರತವು ವೈಮಾನಿಕ ದಾಳಿ ನಡೆಸಿದಾಗ ಸೇನಾ ಮುಖ್ಯಸ್ಥರಾಗಿದ್ದು ಇದೇ ಬಿಪಿನ್ ರಾವತ್.

ಪಾಕಿಸ್ತಾನಕ್ಕೆ ಕಠಿಣ ಸಂದೇಶ:

ನಡೆದ ಸರ್ಜಿಕಲ್ ದಾಳಿಗಳ ಕುರಿತು ಬಿಪಿನ್ ರಾವತ್ ರವರು ಹೇಳಿದ್ದರು: 'ಉರಿ ಭಯೋತ್ಪಾದನಾ ದಾಳಿಯ ನಂತರದ ಸರ್ಜಿಕಲ್ ಸ್ಟ್ರೈಕ್ ಮತ್ತು ಬಾಲಾಕೋಟ್ ವೈಮಾನಿಕ ದಾಳಿಗಳು ಪಾಕಿಸ್ತಾನಕ್ಕೆ ಬಲವಾದ ಎಚ್ಚರಿಕೆಯನ್ನು ನೀಡಿವೆ. ಅದು "ಇನ್ನು ಮುಂದೆ ಭಯೋತ್ಪಾದಕರನ್ನು ನಿಯಂತ್ರಣಾ ರೇಖೆಯ ಮೂಲಕ ಕಳುಹಿಸುವ ಆಟಗಳು ದೀರ್ಘಾವಧಿ ವರೆಗೂ ನಡೆಯುವುದಿಲ್ಲ" ಎಂಬುದನ್ನು ಸ್ಪಷ್ಟಪಡಿಸಿದ್ದರು.

2015 ರ ಅಪಘಾತದಲ್ಲಿ ಬದುಕುಳಿದಿದ್ದ ರಾವತ್:

ಡಿಸೆಂಬರ್ 31, 2019 ರಂದು ಭಾರತದ ಮೊದಲ ಸಿಡಿಎಸ್ ಆಗಿ ಅಧಿಕಾರ ವಹಿಸಿಕೊಂಡ ಜನರಲ್ ರಾವತ್ ಒಮ್ಮೆ ಹೆಲಿಕಾಪ್ಟರ್ ಅಪಘಾತದಿಂದ ಬದುಕುಳಿದರು. ಹೆಲಿಕಾಪ್ಟರ್ 20 ಮೀಟರ್ ಏರುವ ಹಾದಲು ನಿಯಂತ್ರಣ ತಪ್ಪಿ ಅಪಘಾತಕ್ಕೀಡಾಗಿತ್ತು. ಫೆಬ್ರವರಿ 3, 2015 ರಂದು ನಾಗಾಲ್ಯಾಂಡ್‌ನ ದಿಮಾಪುರದಲ್ಲಿ ಚೀತಾ ಅಪಘಾತದಲ್ಲಿ ರಾವತ್ ಬದುಕುಳಿದಿದ್ದರು. ಆ ಸಮಯದಲ್ಲಿ ಅವರು ಲೆಫ್ಟಿನೆಂಟ್ ಜನರಲ್ ಆಗಿದ್ದರು. ಎಂಜಿನ್ ವೈಫಲ್ಯದಿಂದ ಹೆಲಿಕಾಪ್ಟರ್ ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ಪತನಗೊಂಡು ರಾವತ್ ಅವರೊಂದಿಗೆ ಇಬ್ಬರು ಪೈಲಟ್‌ಗಳು ಮತ್ತು ಕರ್ನಲ್ ಬದುಕುಳಿದಿದ್ದರು. ಘಟನೆಯಲ್ಲಿ ಜನರಲ್ ರಾವತ್ ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದವು.

ಚೀನಾದ ವಿರುದ್ಧದ ಕಾರ್ಯಾಚರಣೆ:

2017 ರ ಡೋಕ್ಲಾಮ್ ಸಂಕಷ್ಟ ಎದುರಾದ ಸಂದರ್ಭದಲ್ಲಿ ಜನರಲ್‌ಗೆ ಲೆಫ್ಟಿನೆಂಟ್ ಭಾರತೀಯ ಸೇನೆಯನ್ನು ಮುನ್ನಡೆಸಿದ ಕೀರ್ತಿ ಬಿಪಿನ್ ರಾವತ್ ಅವರಿಗೆ ಸಲ್ಲುತ್ತದೆ. ಇದಲ್ಲದೆ, ಚೀನಾದ ಗತಿ ಅತಿಕ್ರಮಣಕ್ಕೆ

ಪ್ರದೇಶಗಳಲ್ಲಿ ಸೇನೆಯನ್ನು ಮುನ್ನಡೆಸುವ ಕೆಲಸವನ್ನು ಮಾಡುವವರಿದ್ದರು.

## ಮಯನ್ಮಾರ್ ಪ್ರವೇಶಿಸಿ ಬಂಡುಕೋರರ ವಿರುದ್ಧ ಕಾರ್ಯಾಚರಣೆ.

ಮಣಿಪುರದ ಚಂದೇಲ್ ಪ್ರದೇಶದಲ್ಲಿ 2015 ರಲ್ಲಿ ಜೂನ್ 4 ರಂದು ನಾಗಾ ಬಂಡುಕೋರರು ಮಾಡಿದ ದಾಳಿಯಲ್ಲಿ 18 ಯೋಧರು ಹುತಾತ್ಮರಾಗಿದ್ದರು. ಆದರೆ ಇದಾದ 3ನೇ ದಿನದಲ್ಲಿ ಮಯನ್ಮಾರ್‌ಗೆ ನುಗ್ಗಿದ ಭಾರತದ ಯೋಧರು ಸೇಡು ತೀರಿಸಿಕೊಂಡರು. ಇಂತಹ ಮಹತ್ವದ ಕಾರ್ಯಾಚರಣೆಯ ಮೇಲ್ವಿಚಾರಣೆ ವಹಿಸಿದ್ದು ಬಿಪಿನ್ ರಾವತ್ ಅವರೇ. "2015 ರ ಜೂನ್ 7 ರಂದು ಮಯನ್ಮಾರ್ ಪ್ರವೇಶಿಸಿದ ಭಾರತದ ಯೋಧರು 40 ನಿಮಿಷದಲ್ಲಿ 38 ನಾಗಾ ಬಂಡುಕೋರರನ್ನು ಹೊಡೆದುರುಳಿಸಿದ್ದರು."

2015 ರಲ್ಲಿ ಮಯನ್ಮಾರ್‌ನಲ್ಲಿ ನಡೆದ ಭಯೋತ್ಪಾದಕರ ವಿರುದ್ಧದ [illegible] ಕಾರ್ಯಾಚರಣೆಯಲ್ಲಿ ರಾವತ್ ಅವರು ಮಹತ್ವದ ಪಾತ್ರ ವಹಿಸಿದ್ದರು. ಈಶಾನ್ಯ ರಾಜ್ಯಗಳಲ್ಲಿ ಬಂಡುಕೋರರು, ಉಗ್ರರ ಉಪಟಳಕ್ಕೆ ಕಡಿವಾಣ ಹಾಕುವಲ್ಲಿ ರಾವತ್ ಅವರ ಪಾತ್ರ ಮಹತ್ವವಾದದ್ದು.

## ಪದಕಗಳು ಹಾಗೂ ಶ್ಲಾಘನಗಳು :

ಬಿಪಿನ್ ರಾವತ್ ಅವರ ಸಂಪೂರ್ಣ ಸೇವಾ ವೃತ್ತಿಜೀವನದ 42 ವರ್ಷಗಳ ಅವಧಿಯಲ್ಲಿ ಸಲ್ಲಿಸಿದ ವಿಶಿಷ್ಟ ಸೇವೆ ಮತ್ತು ಶೌರ್ಯಕ್ಕಾಗಿ, ಇವರಿಗೆ PVSM, UYSM, AVSM, YSM, SM ಮತ್ತು VSM ಸೇರಿದಂತೆ ಹಲವಾರು ರಾಷ್ಟ್ರಪತಿ ಪ್ರಶಸ್ತಿಗಳನ್ನು ನೀಡಲಾಗಿದೆ. ಇವುಗಳ ಜೊತೆಗೆ, ಅವರು 2 ಸಂದರ್ಭಗಳಲ್ಲಿ ಸೇನಾ ಮುಖ್ಯಸ್ಥರ ಶ್ಲಾಘನ ಮತ್ತು ಸೇನಾ ಕಮಾಂಡರ್ ಪ್ರಶಂಸೆಗೆ ಪಾತ್ರರಾಗಿದ್ದರು

ಕಾರ್ಯಗಳಲ್ಲಿ ಯೂನಿಟ್ ನೊಂದಿಗೆ ಸೇವೆ ಸಲ್ಲಿಸಿದ್ದಾರೆ, ಅನಂತರ ಎರಡು ಸ್ಟಾರ್ ಜನರಲ್ ಕಮಾಂಡರ್ ಸ್ಥಾನ ನೀಡಲಾಗಿದೆ.

## ವೈವಾಹಿಕ ಜೀವನ :-

ಬಿಪಿನ್ ರಾವತ್ ಅವರು ಮಧುಲಿಕಾ ರವರನ್ನು 1985ರಲ್ಲಿ ವಿವಾಹವಾದರು. ರಾಜಕಾರಣಿ ಕುಂ. ಮೃಗೇಂದ್ರ ಸಿಂಗ್ ಅವರ ಪುತ್ರಿಯಾದ ಮಧುಲಿಕಾ ರಾವತ್, ಮೂಲತಃ ಮಧ್ಯಪ್ರದೇಶದ ಶಹ್ದೋಲ್ ಜಿಲ್ಲೆಯ ಸೊಹಾಗಪುರದವರು. ಹಲವು ವರ್ಷಗಳಿಂದ ನಿಲಯದಲ್ಲಿ ಸೈನಿಕರ ಪತ್ನಿಯಲ್ಲಿ ಕೆಲಸ ಮಾಡಿದ್ದಾರೆ. ಇವರು ಆರ್ಮಿ ವೈವ್ಸ್ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷೆಯಾಗಿದ್ದರು. ರಾವತ್ ದಂಪತಿಗೆ ಕೃತಿಕಾ ರಾವತ್ ಮತ್ತು ತಾರಿಣಿ ರಾವತ್ ಎಂಬ ಇಬ್ಬರು ಪುತ್ರಿಯರಿದ್ದಾರೆ

## ಬಿಪಿನ್ ರಾವತ್ ಅವರ ಸೇನಾ ಜವಾಬ್ದಾರಿ:

1978 ಡಿಸೆಂಬರ್ 16 ರಂದು ಗೋರ್ಖಾ ರೈಫಲ್ ನಲ್ಲಿ ಸೇರ್ಪಡೆಗೊಂಡು, ಹಂತ ಹಂತವಾಗಿ ವಿವಿಧ ಹುದ್ದೆಗಳನ್ನು ಅಲಂಕರಿಸಿದರು. 1) ಸೇನೆಯ 37ನೇ ಉಪಮುಖ್ಯಸ್ಥರಾಗಿ 2016 ರ ಸೆಪ್ಟೆಂಬರ್ 1 ರಿಂದ ಡಿಸೆಂಬರ್ 31 ರವರೆಗೆ ಕಾರ್ಯನಿರ್ವಹಿಸಿದರು. ಸೇನೆಯ 27ನೇ ಮುಖ್ಯಸ್ಥರಾಗಿ 2016 ರ ಡಿಸೆಂಬರ್ 31 ರಿಂದ 2019 ರ ಡಿಸೆಂಬರ್ 31 ರವರೆಗೆ ಕಾರ್ಯನಿರ್ವಹಿಸಿದರು. ಸೇನಾ ಸಿಬ್ಬಂದಿ ಸಮಿತಿಯ 32ನೇ ಮುಖ್ಯಸ್ಥರಾಗಿ 2019 ರ ಸೆಪ್ಟೆಂಬರ್ 27 ರಿಂದ ಡಿಸೆಂಬರ್ 31 ರವರೆಗೆ ಕಾರ್ಯನಿರ್ವಹಿಸಿದರು. ಭಾರತದ ಮೂರು ಸೇನಾ ಪಡೆಗಳ ಮುಖ್ಯಸ್ಥರಾಗಿ (CDS) 2019 ರ ಡಿಸೆಂಬರ್ 31 ರಿಂದ 2021 ಡಿಸೆಂಬರ್ 8 ರ ವರೆಗೆ ಕಾರ್ಯನಿರ್ವಹಿಸಿ

## ರಾವತ್ ಅವರ ಯೋಗದಾನಗಳು :-


ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ನ್ಯೂಕ್ಲಿಯರ್ ಅಥಾರಿಟಿಯ ಸದಸ್ಯರಾಗಿದ್ದರು. ಸೇನೆಯ ಮೂರು ಪಡೆಗಳಿಗೆ ಅವರು ರಕ್ಷಣಾ ಸಲಹೆ ನೀಡುತ್ತಿದ್ದರು. ರಕ್ಷಣಾ ಸ್ವಾಧೀನ ಸಮಿತಿ, ರಕ್ಷಣಾ ಯೋಜನಾ ಸಮಿತಿಯ ಸದಸ್ಯರಾಗಿದ್ದರು. ಮೂರು ಪಡೆಗಳ ಮಧ್ಯೆ ಸಂವಹನ, ಸಂಪರ್ಕ ಸಾಧಿಸುವುದೂ ಅವರ ಹೊಣೆಗಾರಿಕೆಯಾಗಿತ್ತು. ಅಂತಾರಾಷ್ಟ್ರೀಯ ಸಹಕಾರ ಯೋಜನೆ ರೂಪಿಸುವುದು, ಮಾನವೀಯ ನೆರವು ನೀಡುವುದು ಇವರ ಜವಾಬ್ದಾರಿಯಾಗಿತ್ತು. ನಿರೀಕ್ಷಿತ ಬಜೆಟ್‌ನ ಆಧಾರದ ಮೇಲೆ ಬಂಡವಾಳ ಸ್ವಾಧೀನ ಪ್ರಸ್ತಾವನೆ ನಿರ್ಧರಿಸುವುದು, ಮೂರು ಪಡೆಗಳ ದಕ್ಷತೆ ಹೆಚ್ಚಿಸುವುದು, ಶೋಧ, ಪ್ರತಿದಾಳಿಗೆ ಸಜ್ಜುಗೊಳಿಸುವುದು, 5 ವರ್ಷದ ರಕ್ಷಣಾ ಬಂಡವಾಳ ಸ್ವಾಧೀನ ಯೋಜನೆ (ಡಿಸಿಎಪಿ) ಯನ್ನು ರೂಪಿಸುವುದು, ದೇಶೀಯವಾಗಿ ಶಸ್ತ್ರ ಉತ್ಪಾದನೆ ಹೆಚ್ಚಿಸಲು ಯೋಜನೆ ರೂಪಿಸುವುದೂ.

## ಮೊದಲ ಸಿಡಿಎಸ್ ಆಗಿ ಬಿಪಿನ್ ರಾವತ್:

ಬಿಪಿನ್ ರಾವತ್ ಅವರು ದೇಶದ ಮೊದಲ ಸಿಡಿಎಸ್ ಆಗಿದ್ದರು. ಭೂ ಸೇನೆ, ನೌಕಾ ಸೇನೆ ಮತ್ತು ವಾಯುಸೇನೆ ಈ ಮೂರು ವಿಭಾಗಗಳ ಮುಖ್ಯಸ್ಥರ ನೇಮಕವಾಗಬೇಕು ಎಂಬ ಬೇಡಿಕೆ ಹಲವು ದಶಕಗಳಿಂದ ಕೇಳಿಬಂದಿತ್ತು. ಅದರಲ್ಲೂ 1999ರ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಬೇಡಿಕೆ ಮತ್ತಷ್ಟು ತೀವ್ರಗೊಂಡಿತು. ಹಿನ್ನೆಲೆಯಲ್ಲಿ ಸೇನಾ ಮುಖ್ಯಸ್ಥರಾಗಿದ್ದ ರಾವತ್ ಅವರ ದಕ್ಷತೆಯನ್ನು ಪರಿಗಣಿಸಿ ಕೇಂದ್ರ ಸರ್ಕಾರ 2019ರಲ್ಲಿ ಅವರನ್ನು ಸಿಡಿಎಸ್ ಆಗಿ ನೇಮಿಸಿತ್ತು.

ಮರಣ :

2021 ರ ಡಿಸೆಂಬರ್ 8 ರಂದು
ಭಾರತೀಯ ಮೂರು ಸೇನಾ ಪಡೆ
ಗಳ ಮೊದಲ ಮುಖ್ಯಸ್ಥರಾದ
[ಸಿಡಿಎಸ್] ಜನರಲ್ ಬಿಪಿನ್ ರಾವತ್
ಅವರು ತಮಿಳುನಾಡಿನ ನೀಲಗಿರಿ
ಪರ್ವತ ಶ್ರೇಣಿಯ ಕೂನೂರು
ಜಿಲ್ಲೆಯ ವೆಲ್ಲಿಂಗ್ಟನ್ ನಿಂದ 16 ಕಿ.ಮೀ
ದೂರದಲ್ಲಿ ಸೇನಾ ಹೆಲಿಕಾಪ್ಟರ್ (Mi-17V5)
ಪತನಗೊಂಡು ನಿಧನರಾದರು.
ಇವರೊಂದಿಗೆ ಅವರ ಪತ್ನಿ
ಮಧುಲಿಕಾ ಸೇರಿ 13 ಮಂದಿ
ದುರ್ಮರಣ ಹೊಂದಿದ್ದಾರೆ. ಒಟ್ಟಾರೆ




ಹೆಲಿಕಾಪ್ಟರ್ ನಲ್ಲಿದ್ದ 14 ಮಂದಿ ಪೈಕಿ 13 ಮಂದಿ ದುರ್ಮರಣಕ್ಕೀಡಾಗಿದ್ದಾರೆ.

ದುರಂತ ಜರುಗಿದ್ದು ಹೇಗೆ?:- ತಮಿಳುನಾಡಿನ ನೀಲಗಿರಿ ಹಿಲ್ಸ್‌ನ ವೆಲ್ಲಿಂಗ್ಟನ್ ನಲ್ಲಿರುವ ಡಿಫೆನ್ಸ್ ಸರ್ವೀಸ್ ಆಫ್ ಕಾಲೇಜಿನಲ್ಲಿ ನಡೆಯಲಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಲು ದೆಹಲಿಯಿಂದ ವಿಮಾನದಲ್ಲಿ ಆಗಮಿಸಿ ಕೊಯಮತ್ತೂರು ಜಿಲ್ಲೆಯ ಸೂಳೂರು ಎಂಬಲ್ಲಿಂದ ಹೆಲಿಕಾಪ್ಟರ್ ನಲ್ಲಿ ಪತ್ನಿ ಹಾಗೂ ಇತರೆ 12 ಸಿಬ್ಬಂದಿಯೊಂದಿಗೆ ಪ್ರಯಾಣಿಸುತ್ತಿದ್ದ ಜ. ರಾವತ್ ಅವರು ವೆಲ್ಲಿಂಗ್ಟನ್ ತಲುಪಲು 5 ನಿಮಿಷ ಬಾಕಿಯಿರುವಾಗಲೇ ಹೆಲಿಕಾಪ್ಟರ್ ಪತನಗೊಂಡಿತು

ಹೀಗೆ ಬಿಪಿನ್ ರಾವತ್ ಜೀವನವು ದುರಂತದಿಂದ ಅಂತ್ಯಗೊಂಡಿದೆ. ದೇಶದ ಅಪ್ರತಿಮ ಯೋಧನನ್ನು ಕಳೆದುಕೊಂಡಿರುವ ಭಾರತಕ್ಕೆ ತುಂಬಲಾರದ ನಷ್ಟ ಆಗಿದೆ. ದೇಶ ಪ್ರೇಮಕ್ಕೆ ಇನ್ನೊಂದು ಹೆಸರು ಈ ಬಿಪಿನ್ ರಾವತ್. ಇವರ ಆದರ್ಶ ಗುಣಗಳು ಇಂದಿನ ಯುವ-ಪೀಳಿಗೆ ಅಳವಡಿಸಿಕೊಳ್ಳಬೇಕು.